# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 762 |
| ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀ ಅರವಿಂದ ಕುಮಾರ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 22.02.2023 |
| ಉತ್ತರಿಸುವ ಸಚಿವರು | : | ಮಾನ್ಯ ಪಶುಸಂಗೋಪನೆ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಫೆಬ್ರುವರಿ 2022 ರಂದು ವಿಶ್ವವಿದ್ಯಾಲಯದಲ್ಲಿ ಬೋಧಕ ಬೋಧಕೇತರ ಹುದ್ದೆಗಳು ಸುಮಾರು 1500 ಖಾಲಿ ಇವೆ ಎಂದು ಹೇಳಲಾಗಿದ್ದು, ಸದರಿ ಹುದ್ದೆಗಳನ್ನು ಭರ್ತಿ ಮಾಡಲಾಗಿದೆಯೇ; | ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬೀದರ ಇಲ್ಲಿನ (ವಿಶ್ವವಿದ್ಯಾಲಯ ಅಧೀನದ ಎಲ್ಲಾ ಅಂಗ ಸಂಸ್ಥೆಗಳು ಸೇರಿದಂತೆ) ಸರ್ಕಾರದಿಂದ ಮಂಜೂರಾದ, ಭರ್ತಿಗೆ ಪ್ರಸ್ತಾವನೆ ಸಲ್ಲಿಸಿದ ಹಾಗೂ ಭರ್ತಿ ಮಾಡಿಕೊಳ್ಳಲು ಸರ್ಕಾರ ಅನುಮತಿಸಿದ ಹುದ್ದೆಗಳ ವಿವರ ಈ ಕಳಗಿನಂತಿದೆ. |

| ವೃಂದಗಳು | ಮಂಜೂರಾದ ಹುದ್ದೆಗಳ ಸಂಖ್ಯೆ | ಭರ್ತಿಯಾದ ಹುದ್ದೆಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ | ಭರ್ತಿ ಮಾಡಿಕೊಳ್ಳಲು ಅನುಮತಿಸಿದ ಹುದ್ದೆಗಳ ಸಂಖ್ಯೆ |
|---|---|---|---|---|
| 1 | 2 | 3 | 4 | 5 |
| ಭೋದಕ | 846 | 262 | 584 | 129 (ಅಥಣಿ ಮಹಾವಿದ್ಯಾಲಯಕ್ಕೆ 25 ಭೋಧಕ ಹುದ್ದೆಗಳು ಸೇರಿ ) |
| ಬೋಧಕೇತರ | 1761 | 241 | 1520 | 122 |
| ಬ್ಯಾಕ್ ಲಾಗ್ (ಬೋಧಕ) | - | - | - | 37 |

ಅನುಚ್ಛೇದ 371(ಜೆ) ರಡಿ ಕಲ್ಯಾಣ ಕರ್ನಾಟಕ ಭಾಗಕ್ಕೆ ಮೀಸಲಾದ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಭೋಧಕರ ವೃಂದದ 104 ಮತ್ತು ಬೋಧಕೇತರ ವೃಂದದ 122 **(ಒಟ್ಟು 226)** ಹಾಗೂ ಬೋಧಕ ವೃಂದದ 36 ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿ ನೀಡಲಾಗಿದ್ದು, ಅದರಂತೆ ಅನುಚ್ಛೇಧ 371 (ಜೆ) ರಡಿ ಮೀಸಲಾದ ಒಟ್ಟು 104 ಹುದ್ದೆಗಳಿಗೆ ಹಾಗೂ 36 ಬೋಧಕ ಬ್ಯಾಕ್‌ಲಾಗ್ ಹುದ್ದೆಗಳಿಗೆ ಭರ್ತಿ ಮಾಡಿಕೊಳ್ಳಲು ಅಧಿಸೂಚನೆ ಹೊರಡಿಸಿ ಅರ್ಜಿಗಳನ್ನು ಸ್ವೀಕರಿಸಿ ದಿನಾಂಕ:15.02.2023 ರಿಂದ 17.02.2023 ರವರೆಗೆ ಸಂದರ್ಶನ/ಕೌನ್ಸಿಲಿಂಗ್ ನಡೆಸಲಾಗಿದೆ. ಶೀಘ್ರದಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗುವುದು.

ಉಳಿದಂತೆ ಪಶುವೈದ್ಯಕೀಯ ಮಹಾವಿದ್ಯಾಲಯ, ಅಥಣಿ ಇಲ್ಲಿಗೆ ಭರ್ತಿ ಮಾಡಿಕೊಳ್ಳಲು ಅನುಮತಿ ನೀಡಿರುವ 25 ಬೋಧಕರ ಹುದ್ದೆಗಳನ್ನು ಹಾಗೂ 122 ಬೋದಕೇತರ

| | | |
|---|---|---|
| | | ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಶೀಘ್ರದಲ್ಲಿ ನೇಮಕಾತಿ ಅಧಿಸೂಚನೆ ಹೊರಡಿಸಲಾಗುವುದೆಂದು ವಿಶ್ವವಿದ್ಯಾಲಯವು ವರದಿಸಿರುತ್ತದೆ. |
| ಆ) | ಹಾಗಿದ್ದಲ್ಲಿ ಯಾವ ಯಾವ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ; ಇದಕ್ಕಾಗಿ ಯಾವ ಮಾನದಂಡನೆಗಳನ್ನು ಅನುಸರಿಸಲಾಗಿದೆ; ಇದರಲ್ಲಿ ರೋಸ್ಟರ್ ಅಳವಡಿಸಲಾಗಿದೆಯೇ ಅಳವಡಿಸದಿದ್ದಲ್ಲಿ ಕಾರಣವೇನು; (ವಿವರ ನೀಡುವುದು) | ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಹುದ್ದೆಗಳ ಪೈಕಿ ಯಾವುದೇ ಹುದ್ದೆಗಳನ್ನು ಈವರೆವಿಗೂ ಭರ್ತಿ ಮಾಡಿಕೊಳ್ಳಲಾಗಿರುವುದಿಲ್ಲ. ಆದರೆ, ಅನುಚ್ಛೇಧ 371 (ಜೆ)ರಡಿಯ ಮೀಸಲಾದ ಬೋಧಕರ ಒಟ್ಟು104 ಹುದ್ದೆಗಳಿಗೆ ಹಾಗೂ 36 ಭೋಧಕ ವೃಂದದ ಬ್ಯಾಕ್‌ಲಾಗ್ ಹುದ್ದೆಗಳನ್ನು ನೇಮಕ ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಿ ದಿನಾಂಕ:15.02.2023 ರಿಂದ 17.02.2023 ರವರೆಗೆ ಕೌನ್ಸಲಿಂಗ್ ನಡೆಸಲಾಗಿದೆ. ನೇಮಕಾತಿ ಆದೇಶ ಶೀಘ್ರದಲ್ಲಿ ನೀಡಲಾಗುವುದು.<br><br>ಸದರಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಯು.ಜಿ.ಸಿ. ನಿಗದಿಪಡಿಸಿದ ಮಾನ ದಂಡಗಳನ್ನು ಹಾಗೂ ಮೀಸಲಾತಿ ನಿಯಾಮವಳಿಯಂತೆ ರೋಸ್ಟರ್ ಬಿಂದುಗಳನ್ನು ಅಳವಡಿಸಿಕೊಳ್ಳಲಾಗಿದೆ. |
| ಇ) | ಹೆಚ್ಚಿನ ಸಂಖ್ಯೆಯಲ್ಲಿ ಹುದ್ದೆಗಳು ಖಾಲಿ ಇದ್ದಲ್ಲಿ ಪಶುವೈದ್ಯಾಧಿಕಾರಿಗಳನ್ನು ನೇಮಕ ಮಾಡದಿರುವುದಕ್ಕೆ ಕಾರಣವೇನು; ಪಶುವೈದ್ಯಾಧಿಕಾರಿಗಳಿಲ್ಲದೆ ರೈತರಿಗೆ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು.<br><br>ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಹಂತ ಹಂತವಾಗಿ ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಭರ್ತಿ ಮಾಡಿಕೊಳ್ಳಲು ಅಗತ್ಯ ಕ್ರಮವಹಿಸಲಾಗುವುದು.<br><br>ಮುಂದುವರೆದು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿ ಹುದ್ದೆಗಳು ಖಾಲಿ ಇರುವ ಸಂಸ್ಥೆಗಳಿಗೆ ಜಾನುವಾರುಗಳ ಚಿಕಿತ್ಸೆಗೆ ತೊಂದರೆ ಆಗದಂತೆ ಅಧಿಕ ಪ್ರಭಾರ ವ್ಯವಸ್ಥೆ ಮಾಡಲಾಗಿದೆ.<br><br>ಪ್ರಸ್ತುತ ಜಾನುವಾರು ಆರೋಗ್ಯ ಮತ್ತು ರೋಗ ನಿಯಂತ್ರಣ ಕಾರ್ಯಕ್ರಮ ಮತ್ತು ಪಶುಸಂಜೀವಿನಿ ಯೋಜನೆಯಡಿ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಒಟ್ಟು 290 ಸಂಚಾರಿ ಪಶುಚಿಕಿತ್ಸಾ ವಾಹನಗಳನ್ನು ನೀಡಲಾಗಿದ್ದು, ಸದರಿ ಸಂಚಾರಿ ಪಶುಚಿಕಿತ್ಸಾ ವಾಹನಗಳಿಗೆ ಅವಶ್ಯವಿರುವ ಪಶುವೈದ್ಯಾಧಿಕಾರಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಕ್ರಮಕೈಗೊಳ್ಳಲಾಗುತ್ತಿದೆ. |
| ಈ) | ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು? | |

**ಸಂಖ್ಯೆ: ಪಸಂಮೀ ಇ-46 ಪಅಸೇ 2022**

(ಪ್ರಭು ಬಿ. ಚವ್ಹಾಣ್)
**ಪಶುಸಂಗೋಪನೆ ಸಚಿವರು**